51	B.K. Sangameshwar	MLA	UDD/672/MNX/05	31.12.04	50x80	L-197 HSR Sec-VI
52	Madhavan Nair	Chairman ISRO	UDD/248/MNX/03	15.10.04	50x80	629 HSR Sec-VI
53	Baburao Kulkarni		UDD/259/MNX/05	10.6.05	50x80	L-205 HSR Sec-VI
54	K.S. Exwarappa	MLA	UDD/073/MNX/05	05.02.05	50x80	42/A HSR Sec-VI
55	R.P. Shankar		UDD/403/MNX/05	24.05.05	40x60	33/A HSR Sec-VI
56	Jagadish Metgud	MLA	UDD/017/MNX/05	18.01.05	50x80	160 NB II/X Blk
57	N. Murthy		UDD/04/MNX/05	04.02.05	50x80	1344 BTM IV/II Blk
58	Puttanna	MLC	UDD/800/MNX/2004 dt. 14/2/2005.		50x80	L-206 HSR Sec-VI
59	B.S. Patil		UDD/783/MNX/2004 Dated 15/2/2005.		50x80	630 HSR Sec-VI.

5393(6202) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಜನ ಮಾಜಿ ಸಚಿವರುಗಳಿಗೆ ಮಾಜಿ ಶಾಸಕರುಗಳಿಗೆ ಮತ್ತು ಹಾಲಿ ಶಾಸಕರುಗಳಿಗೆ ಪರಾಜಿತ ಚುನಾವಣೆಯ ಅಭ್ಯರ್ಥಿಗಳಿಗೆ ಮತ್ತು ಇತರೆ ಸಾರ್ವಜನಿಕ ಸೇವೆಯ ಹುದ್ದೆಯಲ್ಲಿರುವವರಿಗೆ ಅಂಗರಕ್ಷಕ (ಗನ್ ಮ್ಯಾನ್) ಸುರಕ್ಷತಾ ಸೌಲಭ್ಯವನ್ನು ಒದಗಿಸಲಾಗಿದೆ.]

ಆ) ಈ ವ್ಯವಸ್ಥೆಯನ್ನು ಒದಗಿಸುವಾಗ ಅನುಸರಿಸುವ ನಿಯಮಗಳೇನು;

ಇ) ಈ ವ್ಯವಸ್ಥೆಗಾಗಿ ಸಂಬಂಧಪಟ್ಟವರಿಂದ ಸರ್ಕಾರ ಶುಲ್ಕವನ್ನೇನಾದರೂ ಪಡೆದುಕೊಳ್ಳುತ್ತದೆಯೆ;

ಈ) ಇದಕ್ಕೆ ಅನುಸರಿಸುವ ಕ್ರಮ ನಿಯಮಗಳೇನು;

ಉ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಟೆಕ್ಟಿವ್ ಸಂಸ್ಥೆಯವರು ಮತ್ತು ಸೆಕ್ಯುರಿಟಿ ಸಂಸ್ಥೆಯವರು ಸರ್ಕಾರದ ಪರವಾನಿಗಿಯನ್ನು ಪಡೆದುಕೊಂಡು ಅಧಿಕೃತವಾಗಿ ಕರ್ತವ್ಯ ನಿರ್ವಹಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆಯೇ; ಇದರ ವಿವರಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 29 ಮಾಜಿ ಸಚಿವರುಗಳಿಗೆ 14 ಮಾಜಿ ಶಾಸಕರುಗಳಿಗೆ ಮತ್ತು 36 ಹಾಲಿ ಶಾಸಕರುಗಳಿಗೆ 3 ಪರಾಜಿತ ಅಭ್ಯರ್ಥಿಗಳಿಗೆ ಮತ್ತು 8 ಇತರ ಸಾರ್ವಜನಿಕ ಸೇವೆಯ ಹುದ್ದೆಯಲ್ಲಿರುವವರಿಗೆ ಅಂಗರಕ್ಷಕ (ಗನ್ ಮ್ಯಾನ್) ಭದ್ರತೆಯನ್ನು ಒದಗಿಸಲಾಗಿದೆ.

ಆ) ಸಂಬಂಧಪಟ್ಟ ವ್ಯಕ್ತಿಗೆ ಇರುವ ಬೆದರಿಕೆಯ ತೀವ್ರತೆ ಗ್ರಹಿಸಿದ ನಂತರವೇ ಭದ್ರತೆಯನ್ನು ನೀಡಲಾಗುತ್ತಿದೆ.

ಇ) ಭದ್ರತೆ ನೀಡಿರುವ ವ್ಯಕ್ತಿಗಳಿಂದ ಯಾವುದೇ ಶುಲ್ಕವನ್ನು ಪಡೆಯಲಾಗುವುದಿಲ್ಲ. ಆದರೆ ಖಾಸಗಿ ವ್ಯಕ್ತಿಗಳು ಭದ್ರತೆ ಕೋರಿದ್ದಲ್ಲಿ ಅವರಿಗಿರುವ ಬೆದರಿಯನ್ನು ನಿರ್ದರಿಸಿ, ಭದ್ರತೆಯನ್ನು ಅಲ್ಪಾವಧಿಗೆ ನೀಡಲಾಗುತ್ತದೆ. ಭದ್ರತೆಗೆ ನಿಯೋಜಿಸುವ ಸಿಬ್ಬಂದಿ ಸಂಖ್ಯೆಯನ್ನು ಆಧಾರಿಸಿ ಶುಲ್ಕವನ್ನು ಪಡೆಯಲಾಗುವುದು.

ಈ) ಸಂಬಂಧಪಟ್ಟಿರುವ ವ್ಯಕ್ತಿಯಿಂದ ಬೆದರಿಕೆಯ ಕೋರಿಕೆ ಬಂದ ನಂತರ ಅವರಿಗಿರುವ ಬೆದರಿಕೆಯ ತೀವ್ರತೆಯನ್ನು ನಿರ್ದರಿಸಿ, ಅವಶ್ಯವಿದ್ದಲ್ಲಿ ಭದ್ರತೆಯನ್ನು ನೀಡಲಾಗುತ್ತಿದೆ. ಭದ್ರತೆಗೆ ನಿಯೋಜಿಸುವ ಸಿಬ್ಬಂದಿ ಸಂಖ್ಯೆಯನ್ನಾಧರಿಸಿ ಶುಲ್ಕವನ್ನು ಪಡೆಯಲಾಗುವುದು.

ಉ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಭದ್ರತಾ ಸಂಸ್ಥೆಗಳು ಸರ್ಕಾರದಿಂದ ಪರವಾನಿಗಿಯನ್ನು ಪಡೆಯುತ್ತಿಲ್ಲ. ಖಾಸಗಿ ಭದ್ರತಾ ಸಂಸ್ಥೆಗಳ ನಿರ್ವಹಣೆ ಬಗ್ಗೆ ಸಮಗ್ರವಾದ ಕಾಯ್ದೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

5394(6203) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ವಿಜ್ಞಾನ ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಟೆಲಿಮೆಟ್ರಿಕ್ ಮಳೆಮಾಪನ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಕ್ರಮಗಳೇನು ಹಾಗೂ ಇದರ ಉಪಯುಕ್ತತೆಗಳೇನು;

ಆ) ಈ ಆಧುನಿಕ ತಂತ್ರಜ್ಞಾನಕ್ಕೆ ಸರ್ಕಾರ ಮಾಡಲಿರುವ ವೆಚ್ಚ ಎಷ್ಟು;

ಇ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಟೆಲಿಮೆಟ್ರಿಕ್ ಮಳೆಮಾಪನ ಕೇಂದ್ರವನ್ನು ಸ್ಥಾಪಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಈ) ಸದರಿ ಮಳೆಮಾಪನ ಕೇಂದ್ರಗಳನ್ನು ಮುಂದಿನ ಹಚಿತದಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸುವ ಪ್ರಸ್ತಾಪವೆ ಸರ್ಕಾರದ ಮುಂದಿದೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ವಿಜ್ಞಾನ, ತಾಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು) :

ಅ) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಬರುವ ಬರ ಪರಿಹಾರ ಉಸ್ತುವಾರಿ ಕೋಶವು, ಟೆಲಿ ಮೆಟ್ರಿಕ್ ಮಳೆಮಾಪನ ಯಂತ್ರಗಳನ್ನು ದೇಶೀಯವಾಗಿ ಕಡಿಮೆ ಖರ್ಚಿನಲ್ಲಿ ತಯರಿಸಿ ಅದನ್ನು ಪ್ರಾಯೋಗಿಕವಾಗಿ ರಾಜ್ಯದ ಎಲ್ಲಾ ಜಿಲ್ಲಾಕೇಂದ್ರಗಳಲ್ಲಿ ಸ್ಥಾಪಿಸಲು ಕ್ರಮ ಕೈಗೊಂಡಿದೆ.

ಇದರಿಂದಾಗುವ ಉಪಯುಕ್ತತೆಗಳು ಈ ಕೆಳಗಿನಂತಿವೆ;

1) ಈ ಯಂತ್ರವು ದೇಶೀಯವಾಗಿದ್ದು, ಅತೀ ಕಡಿಮೆ ಖರ್ಚಿನಲ್ಲಿ ತಯಾರಿಸಲ್ಪಟ್ಟಿದೆ.

2) ಈ ಟೆಲಿಮೆಟ್ರಿಕಾ ಮಳೆಮಾಪನ ಕೇಂದ್ರಗಳಲ್ಲಿ ಸ್ವಯಂ ಚಾಲಿತ ಮಳೆಮಾಪನ ಉಪಕರಣ ಅಳವಡಿಸಲಾಗಿದ್ದು, ಆ ಪ್ರದೇಶದಲ್ಲಿ ಮಳೆಯಾದ ಪ್ರಮಾಣವನ್ನು, ಮಾನವನ ಹಸ್ತಕ್ಷೇಪವಿಲ್ಲದೆ ಕಾಲ ಕಾಲಕ್ಕೆ ನಿಖರವಾಗಿ ಅಳತೆ ಮಾಡಿ ನಿರ್ದೇಶಿತ ಸ್ಥಳಕ್ಕೆ ನಿಜ ಸಮಯದಲ್ಲಿ ರವಾನಿಸುತ್ತದೆ.

3) ಇದರಿಂದಾಗಿ ಅತಿ ಹೆಚ್ಚಿನ ಮಳೆಯಾದ ಸಂದರ್ಭದಲ್ಲಿ ಸಕಾಲಿಕ ಮುನ್ನೆಚ್ಚರಿಕೆ ಕ್ರಮಗಳನ್ನು ಜಿಲ್ಲಾಡಳಿತವು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಆ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರಾಯೋಗಿಕ ಟೆಲಿಮೆಟ್ರಿಕ್ ಮಳೆಮಾಪನ ಸ್ಥಾಪಿಸಲು ಹಾಗೂ ಅವುಗಳ 3 ವರ್ಷದ ನಿರ್ವಹಣೆ ನೇರ ಅಂದಾಜು 8,50,000 ರೂ.ಗಳ ವೆಚ್ಚ ತಗಲುವುದು.

ಇ) ಹೌದು.

ಈ) ಹೌದು.